ಆರತಿ ಘಟಿಕಾರ್, ದುಬೈ

*ಕೆಲವು ಧಡೂತಿ ಆಸಾಮಿಗಳು ಪಾರ್ಕಿನಲ್ಲಿ ವಾಕಿಂಗ್ ಹೋಗುವಾಗ ತಮ್ಮ ನಾಯಿಗಳನ್ನೂ ಜೊತೆಯಲ್ಲಿ ಕರೆತರುವುದು ಏಕೆ ರಾಮ್‌ಜೀ?*



ಕ್ಷಮಿಸಿ; ದಢೂತಿಗಳನ್ನು ಬಲವಂತವಾಗಿ ನಾಯಿಗಳೇ ವಾಕಿಂಗ್ ಎಳೆದುಕೊಂಡು ಬಂದಿರುವುದು.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಮುಷ್ಕರ ಮಾಡೋ ಮಂದಿಯೇಕೆ ಕಪ್ಪು ಬಟ್ಟೆಯನ್ನೇ ಧರಿಸ್ತಾರೆ?*

ಬಿಳಿ ಬಟ್ಟೆ ಕೊಳೆ ಮಾಡ್ಕೊಂಡ್ರೆ ಮನೆಯವಳು ಸ್ಟ್ರೈಕ್ ಮಾಡುತ್ತಾಳಂತೆ.

ಅಂದಾನಯ್ಯ ತಿಗರಿಮಠ. ಅಳವಂಡಿ

*ಅಡಿಗೆ ಮಾಡುವುದು ವ್ರತ ಇದ್ದಂತೆ; ಹೌದೆ?*

ಹೌದು; ಅದಕ್ಕೇ ಆಧುನಿಕ ಸ್ತ್ರೀ ಅದನ್ನು ಮಾಡುವುದಿಲ್ಲ!


ಎಂ.ಎ. ಕುಮಾರ್, ಬೆಂಗಳೂರು

*ಮೊದಲು ಮಕ್ಕಳಿರಲವ್ವ ಮನೆತುಂಬ ಅನ್ನುತ್ತಿದ್ದರು. ಈಗ?*

ಮಕ್ಕಳಿರಲವ್ವ ಪ್ಲೇಹೋಂ ತುಂಬ!

ಪಾರ್ವತೀ ರಮೇಶ್, ಮೈಸೂರು

*ಸುಲಭವಾಗಿ ಹಣ ಗಳಿಕೆಗೆ ಮಠದ ಸ್ಥಾಪನೆಯೇ ಸರ್ವೋತ್ತಮ ದಾರಿ. ಸ್ವಾಮಿಗಳಾಗಲು ನೀವು ಸಿದ್ಧವೇ?*




ಆಹಾ! ಸ್ವಾಮಿ ಮಾಡಿ ಸಿಸಿಟಿವಿಯಲ್ಲಿ ಸಿಕ್ಕಿಸುವುದು ನನ್ನನ್ನು; ಕೋಳ ನನಗೆ, ಕೊಳ್ಳೆ ನಿಮಗೆ! ಬೇಡಪ್ಪಾ......

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ತಂದೆ ತಾಯಿಗಿಂತ ಮಿಗಿಲಾದ ದೇವರಿಲ್ಲ ಎನ್ನುವವರು ದೇವಸ್ಥಾನಕ್ಕೆ ಹೋಗುವರಲ್ಲಾ ಸಾರ್?*

ಯಕ್ಷಿಯರು, ಕಿನ್ನರಿಯರು, ಅಪ್ಸರೆಯರನ್ನು ನೋಡಿ ಕಣ್ಣು ತುಂಬಿಸಿಕೊಳ್ಳಲು!

ರವಿ.ಎಂ.ಪೈ, ಹೊನ್ನಾವರ

*ಮಹಾಪುರುಷರಿಗೆ, ಕಲಾವಿದರಿಗೆ ಎಂದಿಗೂ ಸಾವಿಲ್ಲ. ಏಕೆ?*

ಸಾಧನೆಯ ಕಲೆ ಉಳಿದುಬಿಡುತ್ತದಲ್ಲ! ಕಾಲ ಎಂಬ ಸೋಪ್ ಹಾಕಿ ಉಜ್ಜಿ ಉಜ್ಜಿ ತೊಳೆದರೂ ಹೋಗದ ಕಲೆ ಅದು!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಹಿಂದೆ ಹಿರಿಯರು ಉಪಯೋಗಿಸುತ್ತಿದ್ದ ಪೀಕದಾನಿ ಈಗ ಎಲ್ಲಿ?*

ಈಗಿನ ಕಾಲಕ್ಕೆ ಅದು ಬಹಳ ಚಿಕ್ಕದಾಯಿತು. ಈಗ ರಸ್ತೆರಸ್ತೆಗಳೇ ಪೀಕದಾನಿಗಳು!

ಅನಂತಪದ್ಮನಾಭ ಹೆಚ್.ಎಂ., ಮೈಸೂರು

*ಪ್ರೊಫೆಷನಲ್ ಕಳ್ಳನಿಗೂ, ಪುಢಾರಿಗೂ ವ್ಯತ್ಯಾಸವೇನು?*

ಪ್ರೊಫೆಷನಲ್ ಕಳ್ಳನ ಎರಡು ಕಳ್ಳತನಗಳ ಮಧ್ಯೆ ಕೆಲವು ದಿನಗಳಷ್ಟಾದರೂ ಗ್ಯಾಪ್ ಇರುತ್ತದೆ.

ಕುಮಾರ ಚಲವಾದಿ, ಹೊಳೆನರಸಿಪುರ

*ಈಗಲೂ ನನ್ನ ಕನಸಿನಲ್ಲಿ ಹೇಮಮಾಲಿನಿ ಕಾಣುತ್ತಿರುವ ಉದ್ದೇಶ ಏನು?*

ಇನ್ನಾದರೂ ಕೊಳಕು ನೀರನ್ನು ಕುಡಿಯುವುದನ್ನು ಬಿಟ್ಟು ಶುದ್ಧ ಪಾನಿ ಕುಡಿಯಿರಿ ಎನ್ನಲು!

ರವೀಂದ್ರನಾಥ. ಶಿ, ಯಡಹಳ್ಳಿ, ಬೀಳಗಿ

*ಕೆರೆಗೆ ಹಾರವಾದ ಭಾಗೀರಥಿಗೂ, ಗಂಗೆಯನ್ನೇ ಧರೆಗಿಳಿಸಿದ ಭಗೀರಥನಿಗೂ ಇರುವ ವ್ಯತ್ಯಾಸವೇನು?*

ಭಾಗೀರಥಿಯದು ಶೋಕರಸ; ಭಗೀರಥನದು ಶ್ಲೋಕರಸ!

ಎಲೆಮುದ್ದನಹಳ್ಳಿ ಸೋಮಶೇಖರ್. ಕೆ.ಆರ್. ನಗರ

*ಜಾತ್ಯತೀತ ರಾಷ್ಟ್ರವೆನ್ನುವ ಭಾರತದಲ್ಲಿ ಜಾತಿಗಳ ಸಂಖ್ಯೆಯೇ ಅಧಿಕವಾಗಿದೆಯಲ್ಲಾ...?*

ರಾಜ-ಕಾರಣ! 'ಜಾತೀ ಹೂ ಮೇ...' ಎಂದು ಹೊರಟುನಿಂತ ಜಾತಿಯನ್ನು 'ಜಲ್ದೀ ಹೈ ಕ್ಯಾ?' ಎನ್ನುತ್ತಾ ಮತದಾಸರೇ ತಡೆದರಂತೆ.

ನವಿರವಿ, ಬಾಳೆಹೊನ್ನೂರು

*ಗಂಡ, ಗುಂಡಿ, ಗಂಡಾಂತರ; ಈ ಪದಗಳ ಅರ್ಥವೇನು?*

ಗಂಡ: ಅಪಾಯ; ಗುಂಡಿ: ಗಂಡನ್ನು ನಂಬಿ ಹೆಣ್ಣು ತೋಡಿಕೊಂಡದ್ದು; ಗಂಡಾಂತರ: ಲಗ್ನ-ಮರುಲಗ್ನದ ಮಧ್ಯದ ಇಂಟರ್‌ವೆಲ್.

## ಬಹುಮಾನಿತ ಪ್ರಶ್ನೆ

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಕನ್ನಡಿ ಯಾಕೆ ಯಾವಾಗಲೂ ಸತ್ಯವನ್ನೇ ಹೇಳುತ್ತೆ?*

ಎಷ್ಟೇ ನಿಜ ಹೇಳಿದರೂ ಯಾರೂ ಹೊಡೆಯುವುದಿಲ್ಲ ಎಂಬ ಧೈರ್ಯ!

ವಿ.ಹೇಮಂತಕುಮಾರ್, ಬೆಂಗಳೂರು

*ಮನೆಯ ಒಳಗೆ ಹೆಂಡತಿ ಇದ್ದಾಳೆಂದು ತಿಳಿಯುವುದು ಹೇಗೆ?*

ಟಿವಿ ವಾಲ್ಯೂಮ್ ಜೋರಾಗಿರತ್ತೆ, ಗಂಡನ ವಾಲ್ಯೂಮ್ ಮ್ಯೂಟ್ ಆಗಿರತ್ತೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಮಗುವನ್ನು ಮಲಗಿಸಬೇಕಾದರೆ ಹಾಲು ಕುಡಿಸಬೇಕು. ಮಂತ್ರಿಗಳನ್ನು ಮಲಗಿಸಲು?*

ಹಾಲಿನಲ್ಲಿ (ಅಸೆಂಬ್ಲಿ/ಪಾರ್ಲಿಮೆಂಟ್) ಕೂಡಿಸಿದರೆ ಸಾಕು.

ಡಾ. ವಿನಯಾ ಶ್ರೀನಿವಾಸ್, ಶಿವಮೊಗ್ಗ

*ಒಂದು ವೇಳೆ ದೇವರೇ ಎದ್ದು ಬಂದು ನಾವು ಸಮರ್ಪಿಸಿದ ನೈವೇದ್ಯಗಳನ್ನು ಭಕ್ಷಿಸುವಂತಿದ್ದಿದ್ದರೆ...?*



ವಿಷಕಂಠನಿಗೆ ವಿಷವೇ ಶ್ರೇಷ್ಠ ಎನ್ನುತ್ತಾ ಮಾನವ ತಿನ್ನಲಾಗದುದನ್ನು ಮಾತ್ರ ನೈವೇದ್ಯ

ಎಂ.ವಿ. ವೆಂಕಮ್ಮ, ಬಳ್ಳಾರಿ

*ಇರುಳು ಕಂಡ ಬಾವಿಯಲ್ಲಿ ಹಗಲಲ್ಲೇ ಬೀಳುವವರು ಯಾರು?*

ಕಂಡೂ ಕಂಡೂ ಕೆರೆಯಲ್ಲಿ ಕಟ್ಟಿದ ಅಪಾರ್ಟ್‌ಮೆಂಟ್ ಕೊಂಡವರು.

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

*ತನ್ನ ಹೆಂಡತಿಯನ್ನು ತರತರ ಹೂವಿಗೆ, ಹಣ್ಣುಗಳಿಗೆ ಹೋಲಿಸುತ್ತಿದ್ದ ನನ್ನ ಗೆಳೆಯ ಈಗ ತರತರ ಪ್ರಾಣಿಗಳಿಗೆ ಹೋಲಿಸುತ್ತಿದ್ದಾನಲ್ಲಾ...?*

ಸರಿಯೇ; ಮೊದಲು ಕೇವಲ ಬೃಂದಾವನ್ ಗಾರ್ಡನ್ಸ್ ನೋಡಿದ್ದವನು ಮೊನ್ನೆ ಮೊನ್ನೆ ಝೂಗೆ ಹೋಗಿದ್ದನಂತೆ.

■ ರಾಮ್